
**ನವಿಲುಗನ್ನಡಿ**

# ‘ಮಣ್ಣಿನ ಒಕ್ಕಲು’ ಕಲಾತ್ಮಕ ಪ್ರೌಢಿಮೆ ಹೊಂದಿದ ಕಥನ

**ಬದಲಾವಣೆ** ಬಯಸದ ಸಹಿಸದ ದುಷ್ಟ ಶಕ್ತಿಗಳು ‘ಸಾಹಿತ್ಯದಿಂದ ಅಥವಾ ಬರವಣಿಗೆಯಿಂದ ಪ್ರಗತಿಯಾಗುವುದಿಲ್ಲ, ಸಾಧ್ಯವಿಲ್ಲ’ ಎಂದು ನಿರಾಸೆಯ ತಮಟೆ ಬಡಿದು ಡೋಲು ಬಾರಿಸುತ್ತವೆ. ಕನ್ನಡದ ಪ್ರಮುಖ ಕಥೆಗಾರರಾದ ಕರಿಗೌಡ ಬೀಚನಹಳ್ಳಿ ಅವರ ಕಥೆ ‘ಮಣ್ಣಿನ ಒಕ್ಕಲು’ ಸದ್ದು ಗದ್ದಲ ಇಲ್ಲದೆ ನಿರಾಯಾಸವಾಗಿ ಕ್ರಾಂತಿ ಮಾಡಿದೆ. ಹಳ್ಳಿಯ ಬಾಳನ್ನು ತುಂಬಾ ಸಹಜವಾಗಿ ಚಿತ್ರಿಸುವ ಈ ಕಥೆ ಅಲ್ಲಿ ನಡೆಯುವ ವಿಧವೆಯ ಮದುವೆ ಕುವೆಂಪು ಬೋಧಿಸಿದ ಮಂತ್ರ ಮಾಂಗಲ್ಯ ರೀತಿಯಲ್ಲಿ ನಡೆಯುವುದು ಸ್ವಾಭಾವಿಕ ರೂಢಿಯಂತೆ ಚಿತ್ರಿತವಾಗಿರುವುದು ಕಥೆಯ ಕಲಾತ್ಮಕ ಪ್ರೌಢಿಮೆಯನ್ನು ತೋರಿಸುತ್ತದೆ. ಕಥನದಲ್ಲಿ ಕುವೆಂಪು ಮಂತ್ರ ಮಾಂಗಲ್ಯ ಬೇರು ಬಿಡುವುದನ್ನು ಮೊಟ್ಟಮೊದಲು ದಾಖಲಿಸಿದವರು ಕರಿಗೌಡ ಎಂದು ಕಾಣುತ್ತದೆ.

ಸಾಂಪ್ರದಾಯಿಕ ಮದುವೆಗಳಲ್ಲಿ ಹೇಳಲಾಗುವ ಮಂತ್ರಗಳು ಎಷ್ಟು ಅವಮಾನಕರವಾಗಿವೆ ಎಂದು ಜನರ ಗಮನಕ್ಕೆ ತರುವುದು ತುಂಬಾ ಮುಖ್ಯ. ಋಗ್ವೇದದ ಹತ್ತನೇ ಮಂಡಲದ 85ನೇ ವಿವಾಹ ಸೂತ್ರದಲ್ಲಿ ಹೀಗಿದೆ.

ಎಲೆ ಕನ್ಯೆಯೇ, ನಿನ್ನನ್ನು ಮೊದಲು ಸೋಮ ಪಡೆದನು. ನಂತರ ಗಂಧರ್ವ ಪಡೆದನು. ಅಗ್ನಿ ನಿನಗೆ ಮೂರನೇ ಗಂಡ. ನಾಲ್ಕನೆಯವನು ಈ ಮನುಷ್ಯ. ಕೊನೆಗೆ ಅಗ್ನಿಯು ನನಗೆ ಇವಳನ್ನು ಇವಳ ಜೊತೆಯಲ್ಲಿ ಹಣವನ್ನು ಮತ್ತು ಗಂಡು ಮಕ್ಕಳನ್ನು ಕೊಟ್ಟನು. – ಋಗ್ವೇದ




ಇಂಥ ಅಪಮಾನಕರ ಶಾಸ್ತ್ರಗಳನ್ನು ಬಿಟ್ಟು ಜನರು ಸ್ವಾಭಿಮಾನಿಗಳಾಗಬೇಕು. ಈ ಕೆಲಸವನ್ನು ಕರ್ನಾಟಕ ರಾಜ್ಯ ರೈತ ಸಂಘ ದಲಿತ ಸಂಘರ್ಷ ಸಮಿತಿ ವಿಚಾರವಾದಿ ಒಕ್ಕೂಟ ಮುಂತಾದ ಸಂಘಟನೆಗಳು ಸಾವಿರಾರು ಮಂತ್ರ ಮಾಂಗಲ್ಯ ಮದುವೆಗಳನ್ನು ನೆರವೇರಿಸಿವೆ.

ಪ್ರೊ. ಕೆ.ಎಸ್. ಭಗವಾನ್, ಮೈಸೂರು

## ಭಾವ-ಬಣ್ಣದ ಸಂಚಿಕೆ

**ಮಯೂರ** ಮಾಸದಿಂದ ಮಾಸಕ್ಕೆ ಇನ್ನಷ್ಟು ಆಕರ್ಷಕಗೊಳ್ಳುತ್ತ, ಅರ್ಥತುಂಬಿಕೊಳ್ಳುತ್ತ, ಮನೆ-ಮನಗಳಲ್ಲಿ ತನ್ನ ಜಾಗವನ್ನು ಗಟ್ಟಿಗೊಳಿಸಿಕೊಳ್ಳುತ್ತಿದೆ.

ನಾಂದಿಪದದ ‘ಮಳೆಋತುವಿನ ಭಾವ-ಬಣ್ಣ’ ಎನ್ನುವ ಆಶಯದಂತೆಯೇ ಜುಲೈ ಸಂಚಿಕೆ ಚಿತ್ತಾಕರ್ಷಕ ಬಣ್ಣಗಳಿಂದ, ನವ ನವೀನ ಭಾವಗಳಿಂದ ಮನಕ್ಕೆ ಮುದ ನೀಡುತ್ತದೆ.

ಎರಡನೇ ಪುಟದ ಕುಮಾರ ಕಾಟೇನಹಳ್ಳಿ ಅವರ ಕೊಳಲೂದುವ ಕೃಷ್ಣ ಹಬ್ಬದ ಋತುವನ್ನು ನೆನಪು ಮಾಡಿಕೊಡಲು ನಿಂತಿರುವಂತೆ ಭಾಸವಾಯಿತು.

ಚಿದಾನಂದ ರೇವಯ್ಯ, ವಿಜಯಪುರ